ಮನೆಗೊಬ್ಬರಿಗೆ ಉದ್ಯೋಗ ಕಲ್ಪಿಸುವ ಬಗ್ಗೆ

೧೮೮೪. (ಬ) ಶ್ರೀ ವಸಂತ ವಿ.ಸಾಲಿಯಾನ (ಕಾಪು) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಸ್ತುತ ಸರ್ಕಾರವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಮನೆಗೊಬ್ಬರಿಗೆ ಉದ್ಯೋಗ ಒದಗಿಸುವುದಾಗಿ ಆಶ್ವಾಸನೆ ನೀಡಿದ್ದು ನಿಜವಲ್ಲವೇ ?

ಆ) ಹಾಗಿದ್ದಲ್ಲಿ ಸದರಿ ಆಶ್ವಾಸನೆಯು ಮೇರೆಗೆ ಎಷ್ಟು ಜನರಿಗೆ ಹಾಗೂ ಎಷ್ಟು ಕುಟುಂಬಗಳಿಗೆ ಉದ್ಯೋಗ ಕಲ್ಪಿಸಲಾಗಿದೆ ?

ಇ) ಈ ಆಶ್ವಾಸನೆಯನ್ನು ಪೂರೈಸಲು ಇನ್ನೂ ಎಷ್ಟು ಸಮಯ ಬೇಕಾಗಬಹುದು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಹೌದು

ಆ) ೧೯೮೫-೮೬ ರಿಂದ ೧೯೮೬-೮೭ ರವರೆಗೆ ಅನೇಕ ಯೋಜನಾ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ದಿಸೆಯಲ್ಲಿ ೨,೮೭೧-೭೦ ಲಕ್ಷ ದುಡಿಮೆಯ ದಿನಗಳನ್ನು ಸೃಷ್ಟಿಸಲಾಗಿದೆ. ವರ್ಷವಾರು ಮಾಹಿತಿ ಹೀಗಿದೆ.

ವರ್ಷ	ದುಡಿಮೆಯ ದಿನಗಳು (ಲಕ್ಷಗಳಲ್ಲಿ)
೧೯೮೫-೮೬	೫೪೧.೮೨
೧೯೮೬-೮೭	೫೯೨.೪೭
೧೯೮೭-೮೮	೭೦೧.೩೭
೧೯೮೮-೮೯	೧೦೩೫ ೯೪ (ನಿರೀಕ್ಷಿಸಲಾಗಿದೆ)

ರಾಜ್ಯದ ಯೋಜನೆಗಳಲ್ಲಿ ಉದ್ಯೋಗಾವಕಾಶಗಳನ್ನು ಗಣನೀಯವಾಗಿ ಹೆಚ್ಚಿಸಲಾಗಿದೆ. ಅವಶ್ಯಕತೆ ಇರುವ ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗ ಒದಗಿಸುವುದೇ ಇದರ ಮುಖ್ಯ ಗುರಿ. ಉದ್ಯೋಗ ನೀಡುವಾಗ ಕುಟುಂಬಕ್ಕೆ ಒಬ್ಬರಂತೆ ಉದ್ಯೋಗ ಎಂಬ ನಿಬಂಧನೆಯನ್ನು ವಿಧಿಸಿಲ್ಲವಾದರೂ ಪ್ರತಿ ಕುಟುಂಬದಲ್ಲಿ ಕನಿಷ್ಟ ಒಬ್ಬರಿಗೆ ಉದ್ಯೋಗ ನೀಡುವ ಅವಶ್ಯವಿದೆ ಎಂಬುದು ಸರ್ಕಾರದ ಗಮನದಲ್ಲಿದೆ. ಕಳೆದ ನಾಲ್ಕು ವರ್ಷಗಳಲ್ಲಿ, ಯೋಜನಾ ಕಾರ್ಯಕ್ರಮಗಳಲ್ಲಿ ಈ ಕೆಳಕಂಡಂತೆ ಪೂರ್ಣಾವಧಿ ಉದ್ಯೋಗಗಳನ್ನು ಸೃಷ್ಟಿಸಲಾಗಿದೆ.

ವರ್ಷ	ಸೃಷ್ಟಿಸಲಾಗಿರುವ ಉದ್ಯೋಗಾವಕಾಶಗಳು
೧೯೮೫-೮೬	೧೬,೧೯೭
೧೯೮೬-೮೭	೧೫೫,೩೬೯
೧೯೮೭-೮೮	೨೨,೧೪೮
೧೯೮೮-೮೯	೨೧,೧೫೮

ಸರ್ಕಾರದ ಕ್ರಮಗಳಿಂದಾಗಿ ಸಂಘಟಿತ ವಲಯದಲ್ಲಿನ ಉದ್ಯೋಗಿಗಳ ಸಂಖ್ಯೆ ಸತತವಾಗಿ ಹೆಚ್ಚುತ್ತಿದೆ. ಈ ವಲಯದಲ್ಲಿನ ೧೯೮೨-೮೩ರಲ್ಲಿ ೧೧.೪೨ ಲಕ್ಷದಷ್ಟಿದ್ದ ಉದ್ಯೋಗಿಗಳ ಸಂಖ್ಯೆ ಪ್ರಸ್ತುತ ವರ್ಷದಲ್ಲಿ ೧೩ ಲಕ್ಷಗಳಿಗೆ ಏರಿದೆ.

ಇ) ನಿರ್ದಿಷ್ಟವಾದ ಕಾಲಾವಕಾಶವನ್ನು ಸೂಚಿಸುವುದು ಕಷ್ಟ ಸಾಧ್ಯವಾಗಿದೆ. ಆದರೆ, ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವುದರಿಂದ ಪ್ರತಿ ಕುಟುಂಬದಲ್ಲಿ ಒಬ್ಬರಿಗಾದರೂ ಉದ್ಯೋಗ ಲಭಿಸುವುದೆಂಬ ಭರವಸೆ ಇದೆ.